## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : ರಾಷ್ಟ್ರೀಯ ಶಿಕ್ಷಣ ನೀತಿ 2020 ನ್ನು ಶಾಲಾ ಶಿಕ್ಷಣದಲ್ಲಿ ಅನುಷ್ಠಾನಗೊಳಿಸಲು ಕಾರ್ಯಪಡೆ ಸಮಿತಿ ರಚಿಸುವ ಬಗ್ಗೆ.

**ಓದಲಾಗಿದೆ** : ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ಇವರ ಏಕ ಕಡತ ಸಂಖ್ಯೆ: DIRQA29JDQ2021.

*****

**ಪ್ರಸ್ತಾವನೆ:**

ಕೇಂದ್ರ ಸರ್ಕಾರವು ರೂಪಿಸಿರುವ ರಾಷ್ಟ್ರೀಯ ಶಿಕ್ಷಣ ನೀತಿ– 2020 ರಾಜ್ಯದಲ್ಲಿ ಜಾರಿಗೊಂಡಿರುವುದರಿಂದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳನ್ನು/ಸುಧಾರಣೆಗಳನ್ನು ಜಾರಿಗೆ ತರುವ ನಿಟ್ಟಿನಲ್ಲಿ ರಾಜ್ಯದ ಆದ್ಯತೆಗಳನ್ನು ಮತ್ತು ವಾಸ್ತವತೆಗಳನ್ನು ಪರಿಗಣಿಸಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸಮರ್ಪಕವಾಗಿ ಜಾರಿಗೆ ತಂದು ಅನುಷ್ಠಾನಗೊಳಿಸಲು ತೀರ್ಮಾನಿಸಲಾಗಿರುತ್ತದೆ. ಅದರಂತೆ ಈ ನೀತಿಯನ್ನು ಸಮರ್ಪಕವಾಗಿ ಜಾರಿಗೆ ತರಲು ವಿವಿಧ ಕ್ಷೇತ್ರಗಳಲ್ಲಿ ನಡೆಸಿರುವ ಶಿಕ್ಷಣ ತಜ್ಞರು, ಹಲವು ಪದನಿಮಿತ್ತ ಸದಸ್ಯರುಗಳನ್ನು ಒಳಗೊಂಡ "ಅನುಷ್ಠಾನ ಕಾರ್ಯಪಡೆ ಸಮಿತಿ" ರಚಿಸಲು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಸೂಚಿಸಿರುವ ಹಿನ್ನೆಲೆಯಲ್ಲಿ, ಕೆಲವು ಸದಸ್ಯರುಗಳ ಹೆಸರುಗಳನ್ನು ಪ್ರಸ್ತಾಪಿಸಿ ಸಮಿತಿಯನ್ನು ರಚಿಸಲು ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ ರವರು ಮೇಲೆ ಓದಲಾದ ಏಕ ಕಡತದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಅನುಷ್ಠಾನ ಕಾರ್ಯಪಡೆ ಸಮಿತಿಯನ್ನು ರಚಿಸಲು ಸೂಕ್ತವೆಂದು ಸರ್ಕಾರವು ನಿರ್ಧರಿಸಿ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಇಪಿ 275 ಪಿಜಿಸಿ 2021 ದಿನಾಂಕ:16.09.2021**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ರಾಷ್ಟ್ರೀಯ ಶಿಕ್ಷಣ ನೀತಿ –2020 ರಾಜ್ಯದಲ್ಲಿ ಜಾರಿಗೊಂಡಿರುವುದರಿಂದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರದಲ್ಲಿ ಹಲವಾರು ಬದಲಾವಣೆಗಳನ್ನು/ಸುಧಾರಣೆಗಳನ್ನು ಜಾರಿಗೆ ತರುವ ನಿಟ್ಟಿನಲ್ಲಿ ರಾಜ್ಯದ ಆದ್ಯತೆಗಳನ್ನು ಮತ್ತು ವಾಸ್ತವತೆಗಳನ್ನು ಪರಿಗಣಿಸಿ ರಾಜ್ಯ ಶಿಕ್ಷಣ ನೀತಿಯನ್ನು ಜಾರಿಗೆ ತಂದು ಅನುಷ್ಠಾನಗೊಳಿಸಲು ರಾಷ್ಟ್ರೀಯ ಶಿಕ್‌ಷಣ ನೀತಿ –2020ನ್ನು ಶಾಲಾ ಶಿಕ್ಷಣದಲ್ಲಿ ಅನುಷ್ಠಾನಗೊಳಿಸಲು ಕಾರ್ಯಪಡೆ ಸಮಿತಿಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ರಚಿಸಿ ಆದೇಶಿಸಿದೆ.

# ಅನುಷ್ಠಾನ ಕಾರ್ಯಪಡೆ ಸಮಿತಿ (ಟಾಸ್ಕ್‌ಫೋರ್ಸ್)

| ಕ್ರಸಂ. | ಹೆಸರು ಮತ್ತು ಪದನಾಮ (ಶ್ರೀ/ಶ್ರೀಮತಿ) | ಕೋರ್ ಸಮಿತಿಯಲ್ಲಿ ಪದನಾಮ |
|---|---|---|
| 1. | ಶ್ರೀ.ಮದನ್ ಗೋಪಾಲ್, ಭಾ.ಆ.ಸೇ (ನಿವೃತ್ತ) | ಅಧ್ಯಕ್ಷರು |
| 2. | ರಿಷಿಕೇಶ್, ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ | ಸದಸ್ಯರು |
| 3. | ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 4. | ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ | ಸದಸ್ಯ ಕಾರ್ಯದರ್ಶಿ |
| 5. | ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ. | ಸದಸ್ಯರು |
| 6. | ಶ್ರೀ.ಬೆಳ್ಳಶೆಟ್ಟಿ, ನಿವೃತ್ತ ನಿರ್ದೇಶಕರು, ಸಾ.ಶಿ ಇಲಾಖೆ ಹಾಗೂ ಸಮಾಲೋಚಕರು, ಕೆ.ಆರ್.ಐ.ಇ.ಎಸ್ ಬೆಂಗಳೂರು | ಸದಸ್ಯರು |
| 7. | ಡಾ॥ಪ್ರವೀಣ್ ಕುಮಾರ್ ಸಯ್ಯಪ್ಪರಾಜ್, ಶಿಕ್ಷಣ ತಜ್ಞರು | ಸದಸ್ಯರು |
| 8. | ಗಣೇಶ್ ಭಟ್, ನಿವೃತ್ತ ಪ್ರಾಂಶುಪಾಲರು, ಎಂ.ಇ.ಎಸ್ ಟೀಚರ್ಸ್ ಕಾಲೇಜ್, ಬೆಂಗಳೂರು | ಸದಸ್ಯರು |
| 9. | ಪ್ರೊ.ರಾಜು, ನಿವೃತ್ತ ಪ್ರಾಧ್ಯಾಪಕರು, ಬಿ.ಇ.ಎಸ್ ಟೀಚರ್ಸ್ ಕಾಲೇಜು, ಬೆಂಗಳೂರು | ಸದಸ್ಯರು |
| 10. | ಡಾ॥ಪದ್ಮಾವತಿ, ಶಿಕ್ಷಣ ತಜ್ಞರು | ಸದಸ್ಯರು |
| 11. | ಎಂ.ಎನ್.ಬೇಗ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | ಸದಸ್ಯರು |
| 12. | ಕ್ಯಾಪ್ಟನ್ ಕೌಸ್ತುವನಾಥ್, State Engagement Officer, ನ್ಯಾಷನಲ್ ಸ್ಕಿಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ | ಸದಸ್ಯರು |
| 13. | ಮರಿಸ್ವಾಮಿ, ಸದಸ್ಯರು, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಬೆಂಗಳೂರು | ಸದಸ್ಯರು |
| 14. | ಶೇಷಗಿರಿ ಮಧುಸೂದನ್, ಶಿಕ್ಷಣ ತಜ್ಞರು, ಯುನಿಸೆಫ್ | ಸದಸ್ಯರು |
| 15. | ಡಾ॥ಸುಪರ್ಣಾ ದಿವಾಕರ್, ಶಿಕ್ಷಣ ತಜ್ಞರು | ಸದಸ್ಯರು |
| 16. | ಡಾ॥ಶಕುಂತಲಾ ಪತ್ರೆ, ನಿವೃತ್ತ ಉಪಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾನಿಲಯ | ಸದಸ್ಯರು |
| 17. | ಡಾ॥ ಮಹಾಬಲೇಶ್ವರ ರಾವ್, ಪ್ರಾಂಶುಪಾಲರು, ಬಿ.ಇಡಿ ಕಾಲೇಜು, ಉಡುಪಿ | ಸದಸ್ಯರು |
| 18. | ಶ್ರೀ.ಬಸವರಾಜ್, ನಿವೃತ್ತ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| 19. | ಶ್ರೀ ಬಿ.ಎ. ಸುಬ್ರಮಣ್ಯ, ನಂ. 9/2, 9ನೇ ಮುಖ್ಯರಸ್ತೆ, ಬಿ.ಎಸ್.ಕೆ. 1ನೇ ಹಂತ, 2ನೇ ಬ್ಲಾಕ್, ಬೆಂಗಳೂರು – 560050. | ಸದಸ್ಯರು |
| 20. | ಶ್ರೀ ಚಿದಾನಂದ ಎ.ಕೆ. ಪಾಟೀಲ್, ಗೊರವಗುಂಡಗಿ, ಸಿಂಧಗಿ ತಾಲ್ಲೂಕು, ವಿಜಯಪುರ ಜಿಲ್ಲೆ 568 123 | ಸದಸ್ಯರು |
| 21. | ಶ್ರೀ ಪರಮೇಶ್ವರ ವಿ. ಹೆಗ್ಗಡೆ, ಗೀತ್ ಗಂಗಾ, 4834/41, ಸಿವಿಲ್ ಆಸ್ಪತ್ರೆ ರಸ್ತೆ, ಕೃಷ್ಣದೇವರಾಯ ವೃತ್ತ, ಬೆಳಗಾವಿ 590001. | ಸದಸ್ಯರು |

ಸಮಿತಿಯು ಆದ್ಯತೆಯ ಮೇಲೆ ನಿಗದಿತ ಅವಧಿಯಲ್ಲಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕಾರ್ಯಪ್ರವೃತ್ತರಾಗಬೇಕಾಗಿರುತ್ತದೆ.

1. Preparation and finalization of draft implementation frame work
ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದ ಕರಡು ಚೌಕಟ್ಟನ್ನು ತಯಾರಿಸುವುದು ಹಾಗೂ ನೀತಿಯ ಕರಡು ದಾಖಲೆಯನ್ನು ಪರಿಶೀಲಿಸಿ ಅಂತಿಮಗೊಳಿಸುವುದು

2. Working out the details of draft implementation frame work in consultation with stakeholders.
ಎಲ್ಲಾ ಭಾಗೀದಾರರರೊಂದಿಗೆ ಸಮಾಲೋಚಿಸಿ ಕರಡು ಶಿಕ್ಷಣ ನೀತಿಯ ಚೌಕಟ್ಟನ್ನು ಅಚ್ಚುಕಟ್ಟಾಗಿ ನಿರ್ವಹಿಸುವುದು.

3. Provide guidance in formulating SCFECCE and State Curriculum Framework 2020 for classes 1 to 12.
ಪೂರ್ವ ಪ್ರಾಥಮಿಕ ಹಂತದ ರಾಜ್ಯ ಪಠ್ಯವಸ್ತು ಚೌಕಟ್ಟು ಹಾಗೂ 1 ರಿಂದ 12ನೇ ತರಗತಿವರೆವಿಗೂ ರಾಜ್ಯ ಪಠ್ಯವಸ್ತು ಚೌಕಟ್ಟನ್ನು ತಯಾರಿಸುವಲ್ಲಿ ಮಾರ್ಗದರ್ಶನ ನೀಡುವುದು.

4. Presenting papers on the status of implementation, allotting tasks, monitoring them, identification of gaps and rebuilding necessary policies to bridge the gaps.
ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಲು ಅಗತ್ಯವಿರುವ ಕಾರ್ಯಗಳನ್ನು ಹಂಚುವುದು, ಅವುಗಳ ಮೇಲುಸ್ತುವಾರಿ ಮಾಡುವುದು, ಅಂತರಗಳನ್ನು ಗುರ್ತಿಸಿ ಅವುಗಳನ್ನು ನಿವಾರಣೆಗೆ ಅಗತ್ಯವಿರುವ ನೀತಿಗಳನ್ನು ರೂಪಿಸುವುದು ಹಾಗೂ ಅನುಷ್ಠಾನದ ಪ್ರಗತಿ ಕುರಿತು ದಾಖಲೆಗಳನ್ನು ನಿರ್ವಹಿಸುವುದು.

5. Develop mechanisms to ensure inclusive and equitable education to achieve social justice and equality as recommended in NEP 2020.
ರಾಷ್ಟ್ರೀಯ ಶಿಕ್ಷಣ ನೀತಿಯ 2020ರ ಶಿಫಾರಸ್ಸಿನನ್ವಯ ಸಾಮಾಜಿಕ ನ್ಯಾಯ ಮತ್ತು ಸಮಾನತೆಯನ್ನು ಸಾಧಿಸಲು ಸಮನ್ವಯ ಮತ್ತು ಸಮಾನ ಶಿಕ್ಷಣದ ಕಾರ್ಯತಂತ್ರಗಳನ್ನು ರೂಪಿಸಿವುದು.

6. Provide assistance to prepare long term perspective plans for the implementation of NEP.
ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನಕ್ಕಾಗಿ ದೀರ್ಘಾವಧಿ ಯೋಜನೆಗಳನ್ನು ಸಿದ್ಧಪಡಿಸಲು ಸಹಕರಿಸುವುದು.

7. Access and analyze the effects of NEP by 2030 and provide necessary guidance and provide remedial measures.

2030ರವರೆವಿಗೂ ರಾಷ್ಟ್ರೀಯ ಶಿಕ್ಷಣ ನೀತಿಯ ಅನುಷ್ಠಾನದಿಂದಾಗುವ ಪರಿಣಾಮಗಳನ್ನು ವಿಶ್ಲೇಷಿಸಿ ಅಗತ್ಯವಿರುವ ಮಾರ್ಗದರ್ಶನ ಮತ್ತು ಪರಿಹಾರಾತ್ಮಕ ಕ್ರಮಗಳನ್ನು ಸೂಚಿಸುವುದು.

8. ಅಧ್ಯಕ್ಷರ ಸೂಚನೆ ಮೇರೆಗೆ ಸದಸ್ಯ ಕಾರ್ಯದರ್ಶಿರವರು ಸದರಿ ಸಮಿತಿಯ ಸಭೆಗಳನ್ನು ಆಯೋಜಿಸುವರು.

9. ಅವಶ್ಯಕತೆಗನುಗುಣವಾಗಿ ಸದರಿ ಕಾರ್ಯಪಡೆಯು ಸಭೆ ಸೇರುವುದು ಅಥವಾ ತಿಂಗಳಿಗೊಮ್ಮೆ ಕಡ್ಡಾಯವಾಗಿ ಸಭೆ ಸೇರಿ ಅನುಷ್ಠಾನ ಕಾರ್ಯಗಳನ್ನು ಪರಿಶೀಲಿಸಿ ಮಾರ್ಗದರ್ಶನ ನೀಡುವುದು.

**ಸದರಿ ಕಾರ್ಯಪಡೆಯ ವೆಚ್ಚವನ್ನು ಸಮಗ್ರ ಶಿಕ್ಷಣ ಕರ್ನಾಟಕ ಬೆಂಗಳೂರು ಇಲ್ಲಿನ ಅನುದಾನದಲ್ಲಿ ಭರಿಸತಕ್ಕದ್ದು.**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ

ಮತ್ತು ಅವರ ಹೆಸರಿನಲ್ಲಿ

ಹೆಚ್.ಎಸ್. 16/3/2021

(ಹೆಚ್.ಎಸ್. ಶಿವಕುಮಾರ್)

ಸರ್ಕಾರದ ಅಧೀನ ಕಾರ್ಯದರ್ಶಿ,

ಶಿಕ್ಷಣ ಇಲಾಖೆ(ಪ್ರಾಥಮಿಕ ಶಿಕ್ಷಣ)

**ಇವರಿಗೆ:**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು. (ಎಲ್ಲಾ ಕಛೇರಿಗಳಿಗೆ ನಿರ್ದೇಶಕರ ಕಛೇರಿಯ ಮುಖಾಂತರ ಕಳುಹಿಸುವುದು)
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ಬೆಂಗಳೂರು.(ಸಮಿತಿಯ ಅಧ್ಯಕ್ಷರು ಸದಸ್ಯರುಗಳು ಹಾಗೂ ಸದಸ್ಯ ಕಾರ್ಯದರ್ಶಿ ಇವರಿಗೆ ಯೋಜನಾ ನಿರ್ದೇಶಕರ ಮುಖಾಂತರ)
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ / ಧಾರವಾಡ.
5. ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು.
6. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
7. ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳು
8. ಎಲ್ಲಾ ಜಿಲ್ಲೆಯ ಕಾರ್ಯ ನಿರ್ವಹಣಾಧಿಕಾರಿಗಳು
9. ಎಲ್ಲಾ ಜಿಲ್ಲೆಯ ಉಪನಿರ್ದೇಶಕರುಗಳು, ಸಾರ್ವಜನಿಕ ಶಿಕ್ಷಣ ಇಲಾಖೆ
10. ಎಲ್ಲಾ ಜಿಲ್ಲೆಯ ಉಪನಿರ್ದೇಶಕರುಗಳು ಪದವಿಪೂರ್ವ ಶಿಕ್ಷಣ ಇಲಾಖೆ
11. ಶಾಖಾ ರಕ್ಷಾ ಕಡತ.

ಪ್ರತಿಗಳು:–

1 ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ ಬೆಂಗಳೂರು.

2 ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಇವರ ಆಪ್ತ ಕಾರ್ಯದರ್ಶಿ

3. ಸರ್ಕಾರದ ಜಂಟಿ ಕಾರ್ಯದರ್ಶಿ (ಆಡಳಿತ)/ಸರ್ಕಾರದ ಉಪಕಾರ್ಯದರ್ಶಿ (ಸೇವೆಗಳು)ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರ ಅಪ್ತ ಸಹಾಯಕರು.